ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 12/07/2019

## ಜಿಪಂ, ತಾಪಂ. ಅನುದಾನ ಹೆಚ್ಚಳಕ್ಕೆ ಸಚಿವ ಸಂಪುಟ ನಿರ್ಧಾರ

# ಎಸ್‌ಟಿ ಮೀಸಲು ಪರಿಶೀಲನೆಗೆ ಆಯೋಗ

■ ವಿಕ ಸುದ್ದಿಲೋಕ ಬೆಂಗಳೂರು

ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳ ಅನುದಾನ ಹೆಚ್ಚಳದ ಬೇಡಿಕೆಗೆ ಸಂಪುಟ ಸಭೆ ಗುರುವಾರ ಸಮ್ಮತಿ ನೀಡಿದೆ.



30 ಜಿಲ್ಲಾ ಪಂಚಾಯಿತಿಗಳಿಗೆ ಅವುಗಳ ಭೌಗೋಳಿಕ ವ್ಯಾಪ್ತಿ ಮತ್ತು ಜನಸಂಖ್ಯೆ ಆಧರಿಸಿ ಅನಿರ್ಬಂಧಿತ ಅನುದಾನವನ್ನು ಕನಿಷ್ಠ 4 ಕೋಟಿ ರೂ.ಗಳಿಂದ ಗರಿಷ್ಠ 8 ಕೋಟಿ ರೂ.ಗಳಿಗೆ ನಿಗದಿ ಮಾಡಲಾಗಿದೆ. ಸದ್ಯ ಜಿ.ಪಂ.ಗಳಿಗೆ ತಲಾ 4 ಕೋಟಿ ರೂ.ಅನುದಾನ ನೀಡಲಾಗುತ್ತಿತ್ತು.

ತಾಲೂಕು ಪಂಚಾಯಿತಿಗಳಿಗೆ ನೀಡುತ್ತಿರುವ ಅನುದಾನವನ್ನು 1 ರಿಂದ 2 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಿಂದ ಭೌಗೋಳಿಕ ವ್ಯಾಪ್ತಿ ಮತ್ತು ಜನಸಂಖ್ಯೆ ಆಧರಿಸಿ ಗರಿಷ್ಠ 3 ಕೋಟಿ ರೂ. ಅನುದಾನ ನೀಡಲು ಸಂಪುಟ ನಿರ್ಧರಿಸಿತು ಎಂದು ಸಚಿವ ಕೃಷ್ಣಭೈರೇಗೌಡ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಅತೃಪ್ತರ ಉಳಿಸಿಕೊಳ್ಳುವ ಉದ್ದೇಶದಿಂದ ಸಂಪುಟ ಪುನಾರಚನೆ ಉದ್ದೇಶಕ್ಕಾಗಿ ಸಚಿವರ ರಾಜೀನಾಮೆ ಪಡೆಯಲಾಗಿತ್ತು. ಬಳಿಕ ರಾಜಕೀಯ ಲೆಕ್ಕಾಚಾರ ಬದಲಾಗಿದ್ದರಿಂದ ರಾಜೀನಾಮೆ ಪತ್ರಗಳನ್ನು ಅಂಗೀಕರಿಸಿರಲಿಲ್ಲ. ಹೀಗಾಗಿ, ಗುರುವಾರ ಸಚಿವ ಸಂಪುಟ ಸಭೆ ನಡೆಯಿತು. ಸಚಿವರಾದ ನಾಗೇಶ್, ಆರ್.ಶಂಕರ್ ಹಾಗೂ ಎಂ.ಟಿ.ಬಿ.ನಾಗರಾಜ್ ಸಂಪುಟ ಸಭೆಗೆ ಬರಲಿಲ್ಲ.

**ವಾಲ್ಮೀಕಿ ಹೋರಾಟಕ್ಕೆ ಸ್ಪಂದನೆ, ಆಯೋಗ ರಚನೆ**

ಪರಿಶಿಷ್ಟ ಪಂಗಡದ (ಎಸ್‌ಟಿ) ಮೀಸಲು ಪ್ರಮಾಣ ಹೆಚ್ಚಳ ಮಾಡುವ ಬೇಡಿಕೆ ಪರಿಶೀಲನೆಗೆ ಆಯೋಗವೊಂದನ್ನು ರಚಿಸಲು ಸಭೆ ನಿರ್ಧರಿಸಿತು. ಜನಸಂಖ್ಯೆಗೆ ಅನುಗುಣವಾಗಿ ಎಸ್‌ಟಿ ಮೀಸಲು ಪ್ರಮಾಣವನ್ನು ಸದ್ಯದ ಶೇ.3 ರಿಂದ ಶೇ.7ಕ್ಕೆ ಏರಿಕೆ ಮಾಡಬೇಕು ಎಂದು ವಾಲ್ಮೀಕಿ/ ನಾಯಕ ಸಮುದಾಯ ಇತ್ತೀಚೆಗೆ ಬೃಹತ್ ಪ್ರತಿಭಟನೆ ನಡೆಸಿತ್ತು.

**ಯುಕೆಪಿಗೆ 750 ಕೋಟಿ ರೂ.**

ಕೃಷ್ಣಾ ಮೇಲ್ದಂಡೆ ಯೋಜನೆಯ 2ನೇ ಹಂತದ ನಾರಾಯಣಪುರ ಬಲದಂಡೆ ನಾಲೆ ಜಾಲವನ್ನು ಆರಂಭದಿಂದ 95 ಮೀಟರ್ ವರೆಗೆ ಆಧುನೀಕರಣಗೊಳಿಸುವ ಒಟ್ಟು 750 ಕೋಟಿ ರೂ. ಮೊತ್ತದ ಕಾಮಗಾರಿಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿತು. ಜತೆಗೆ, ಯುಕೆಪಿ ಮೊದಲ ಹಂತದಲ್ಲಿ 375 ಕೋಟಿ ರೂ. ಮೊತ್ತದ ಕಾಮಗಾರಿ ಕೈಗೆತ್ತಿಕೊಳ್ಳಲೂ ಸಂಪುಟ ಅಸ್ತು ನೀಡಿತು.

**ಹನಿ ನೀರಾವರಿಗೆ ಅಸ್ತು**

24 ಜಿಲ್ಲೆಗಳಲ್ಲಿ ಕೃಷಿ ಬೆಳೆಗಳಿಗೆ ಹನಿ ನೀರಾವರಿ ಘಟಕಗಳ ಅಳವಡಿಕೆಗಾಗಿ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ ನೀಡಲು ನಬಾರ್ಡ್ ನಿಂದ 20 ಕೋಟಿ ರೂ.ಗಳ ಯೋಜನೆ ಅನುಷ್ಠಾನಕ್ಕೆ ಸಂಪುಟ ಸಮ್ಮತಿಸಿತು.

"ಪ್ರಧಾನಮಂತ್ರಿ ಕೃಷಿ ಸಂಚಯ್ ಯೋಜನೆಯಡಿ ಈ ಉದ್ದೇಶಕ್ಕೆ ನಿಗದಿಯಾಗಿದ್ದ ಅನುದಾನ ನಿಂತುಹೋಗಿದೆ. ಕಳೆದ ಕೆಲ ವರ್ಷಗಳಿಂದ ನಬಾರ್ಡ್‌ನಿಂದ ಹಣ ಪಡೆದು ಈ ಯೋಜನೆಯಡಿ ರೈತರಿಗೆ ಸಬ್ಸಿಡಿ ಮುಂದುವರಿಸಲಾಗಿದೆ," ಎಂದು ಕೃಷ್ಣಭೈರೇಗೌಡ ತಿಳಿಸಿದರು.

## ಕೆರೆ-ನಾಲೆಗಳಿಗೆ 475 ಕೋಟಿ ರೂ. ವೆಚ್ಚ

■ ಕೊಪ್ಪಳ ಜಿಲ್ಲೆ ತಾವರಗೇರಾ ಪಟ್ಟಣಕ್ಕೆ ತುರವಿಹಳ್ಳದ ತುಂಗಭದ್ರ ಎಡದಂಡೆ ಕಾಲುವೆ ಮೂಲದಿಂದ ನೀರು ಸರಬರಾಜು ಯೋಜನೆಗೆ 88.16 ಕೋಟಿ ರೂ. ವೆಚ್ಚಕ್ಕೆ ಒಪ್ಪಿಗೆ.

■ ವಿಜಯಪುರ ಜಿಲ್ಲೆಯ ಆಲಮೇಲ ಹಾಗೂ ಹಾಸನ ಜಿಲ್ಲೆಯ ಸೋಮನಹಳ್ಳಿಯಲ್ಲಿ ತೋಟಗಾರಿಕೆ ಮಹಾವಿದ್ಯಾಲಯ

**ಸಂಪುಟ ತೀರ್ಮಾನ**



■ ತಿರುಮಲ ದೇವರ ಯಾತ್ರಿಕರ ಅನುಕೂಲಕ್ಕಾಗಿ ಕರ್ನಾಟಕ ಛತ್ರದ ಆವರಣದಲ್ಲಿ 26 ಕೋಟಿ ರೂ. ವೆಚ್ಚದಲ್ಲಿ ಅತಿಥಿಗೃಹ.

■ ಮಂಡ್ಯ ಜಿಲ್ಲೆಯ ಮೇಲುಕೋಟೆ ಕಲ್ಯಾಣಿಗಳ ಪುನರುಜ್ಜೀವನ, ಸೌಂದರ್ಯೀಕರಣಕ್ಕೆ 32 ಕೋಟಿ ರೂ.

■ ಅರ್ಕಾವತಿ ನದಿಯಿಂದ ರಾಮನಗರ ತಾಲೂಕಿನ ಬೋಳಪ್ಪನಹಳ್ಳಿ ಸುತ್ತಲಿನ ಕೆರೆಗಳ ತುಂಬಿಸಲು 28 ಕೋಟಿ ರೂ.ಯೋಜನೆ

■ ರಾಮನಗರ ತಾಲೂಕು ಬೈರಮಂಗಲ ಜಲಾಶಯದ ನಾಲೆಗಳ ಅಭಿವೃದ್ಧಿಗಾಗಿ 106 ಕೋಟಿ ರೂ.

■ ಪಾಂಡವಪುರ ತಾಲೂಕಿನಲ್ಲಿ ಲೋಕಪಾವನಿ ನದಿಯಿಂದ ಸುಂಕಾತೊಣ್ಣೂರು ಹಾಗೂ ಇತರ ಕೆರೆಗಳಿಗೆ ನೀರು ತುಂಬಿಸುವ ಉದ್ದೇಶಕ್ಕೆ 30 ಕೋಟಿ ರೂ.

■ ಬೆಂಗಳೂರು ಉತ್ತರ ತಾಲೂಕಿನ ಗಾಣಿಗರಹಳ್ಳಿ ಕೆರೆ 13 ಕೋಟಿ ರೂ. ಹಾಗೂ ಚಿಕ್ಕಬಾಣಾವರ ಕೆರೆಯನ್ನು 30 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿ

■ ಬೆಳಗಾವಿ ಜಿಲ್ಲೆ ಬೈಲಹೊಂಗಲ ಪಟ್ಟಣಕ್ಕೆ 24/7 ನೀರು ಸರಬರಾಜು ಯೋಜನೆಗೆ 95 ಕೋಟಿ ರೂ.

■ ಹಾಸನ ಜಿಲ್ಲೆ ದೂತನೂರು ಕಾವಲ್ ಬಳಿ ದಂಡಿಗನಹಳ್ಳಿ ಶಾಖಾ ನಾಲೆಯಿಂದ 267 ಎಂಸಿಎಫ್‌ಟಿ ನೀರನ್ನು ಎತ್ತಿ ನೀರಾವರಿ ಸೌಲಭ್ಯ ಕಲ್ಪಿಸುವ ಒಟ್ಟು 141.50 ಕೋಟಿ ರೂ.

## ಜಿಂದಾಲ್ ಚರ್ಚೆಗೆ ಬಂದಿಲ್ಲ

ಜಿಂದಾಲ್ ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಭೂಮಿ ಪರಭಾರೆ ವಿಚಾರದಲ್ಲಿ ಸಚಿವ ಸಂಪುಟ ಉಪ ಸಮಿತಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಹೀಗಾಗಿ ಸಚಿವ ಸಂಪುಟ ಸಭೆಯಲ್ಲೂ ಈ ವಿಚಾರ ಚರ್ಚೆಗೆ ಬಂದಿಲ್ಲ ಎಂದು ಕೃಷ್ಣಭೈರೇಗೌಡ ಸ್ಪಷ್ಟಪಡಿಸಿದ್ದಾರೆ.

**ಪ್ರಮುಖ ನೀತಿ, ನಿರ್ಧಾರಗಳಿಗೆ ತಡೆ ಇಲ್ಲ:** ಮೈತ್ರಿ ಸರಕಾರ ಅಲ್ಪಮತಕ್ಕೆ ಕುಸಿದಿರುವ ಹಿನ್ನೆಲೆಯಲ್ಲಿ ಪ್ರಮುಖ ನೀತಿ, ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಕಾಶ ನೀಡದಂತೆ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ರಾಜ್ಯಪಾಲರು ಸೂಚಿಸಿದ್ದಾರೆ ಎಂಬ ವರದಿಗಳು ನಿಜವಲ್ಲ ಎಂದು ಕೃಷ್ಣಭೈರೇಗೌಡ ಸ್ಪಷ್ಟಪಡಿಸಿದರು.

## ರೈತ ಸಿರಿಗೆ ಚಾಲನೆ



"ಸಿರಿಧಾನ್ಯ ಬೆಳೆಗಾರರಿಗೆ ಪ್ರೋತ್ಸಾಹ ನೀಡಲು ಬಜೆಟ್‌ನಲ್ಲಿ ಪ್ರಕಟಿಸಿದ್ದಂತೆ 'ರೈತ ಸಿರಿ' ಯೋಜನೆ ಅನುಷ್ಠಾನಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತು. ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10,000 ರೂ.ನಂತೆ ತಲಾ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪ್ರೋತ್ಸಾಹಧನ ನೀಡಲಾಗುವುದು" ಎಂದು ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

## ಆಲೂಗಡ್ಡೆ ಪ್ಯಾಕೇಜ್



ರಾಜ್ಯದಲ್ಲಿ ಆಲೂಗಡ್ಡೆ ಬೆಳೆ ಪ್ರದೇಶ ಕುಗ್ಗುತ್ತಿದೆ. ಹೀಗಾಗಿ ಈ ರೈತರಿಗೆ ಉತ್ತೇಜನ ನೀಡಲು ಒಟ್ಟು 25.50 ಕೋಟಿ ರೂ. ಮೊತ್ತದ ವಿಶೇಷ ಪ್ಯಾಕೇಜ್ ಜಾರಿಗೆ ಸಂಪುಟ ನಿರ್ಧರಿಸಿತು. ಪ್ರತಿ ಹೆಕ್ಟೇರ್‌ಗೆ 7,500 ರೂ. ಹಾಗೂ ಸಸ್ಯ ಸಂರಕ್ಷಣಾ ಔಷಧ, ಗೊಬ್ಬರ ಖರೀದಿಗೆ 7,200 ರೂ. ಸೇರಿ ಒಟ್ಟು 14,700 ಗಳ ಪ್ರೋತ್ಸಾಹಧನ ನೀಡಲು ಸಚಿವ ಸಂಪುಟ ತೀರ್ಮಾನಿಸಿತು.

14